# ಯಾರು ಒಲಿದರೇನು

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 483
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 394
3. **Note:** Lyrics given without highlights are as per Ref. 1. The lyrics in Ref. 2 are same as in Ref. 1.
4. **Note:** Singer has followed these lyrics.

ರಾಗ: ಆನಂದ ಭೈರವಿ                    ತಾಳ: ಆದಿ

ಯಾರು ಒಲಿದರೇನು ನಮಗಿನ್ನಾರು ಮುನಿದರೇನು     || ಪ ||
ಕ್ಷೀರಸಾಗರ ಶಾಯಿಯಾದವನ ಸೇರಿದಂಥ ಹರಿದಾಸರಿಗೆ     || ಅಪ ||

ಊರನಾಳುವ ದೊರೆಗಳು ನಮ್ಮನು ದೂರ ಅಟ್ಟಿದರೇನು
ಘೋರಾರಣ್ಯದಿ ತಿರುಗುವ ಮೃಗಗಳು ಅಡ್ಡಗಟ್ಟಿದರೇನು
ಮಾರಿ ಹಿಂಡು ಮತ್ತೆ ಮುಸುಕಿನ ದಂಡು ಮೈಗೆ ಮುತ್ತಿದರೇನು
ವಾರಿಜನಾಭನ ವಸುದೇವಸುತನ ಸಾರುವಂಥ ಹರಿದಾಸರಿಗೆ     || ೧ ||

ಪಡೆದ ತಾಯಿ ತಂದೆ ನಮ್ಮೊಳು ಅಹಿತ ಮಾಡಿದರೇನು
ಮಡದಿ ಮಕ್ಕಳು ಮನೆಯ ನೆಂಟರು ಮುನಿಸುಗುಟ್ಟಿದರೇನು
ಒಡನಾಡುವ ಗೆಳೆಯರು ನಮ್ಮೊಳಗೆ ವೈರವ ಬೆಳೆಸಿದರೇನು
ಕಡಲಶಯನ ಕರುಣಾನಿಧಿ ನಾಮವು ಒಡಲೊಳಗಿಹ ಹರಿದಾಸರಿಗೆ     || ೨ ||

ಕಾನನದೊಳ್ಹರಿದಾಡುವ ಸರ್ಪವು ಕಾಲಿಗೆ ಸುತ್ತಿದರೇನು
ಜೇನಿನಂದದಿ ಕೀಟ ಕ್ರಿಮಿಗಳು ಚರ್ಮಕೆ ಮುತ್ತಿದರೇನು
ಭಾನುನಂದನ ಬುಧ ಮಂಗಳರಾ ಬಲವು ತಪ್ಪಿದರೇನು
ದೀನನಾಥ ಶ್ರೀ ಪುರಂದರ ವಿಠಲನ ಧ್ಯಾನವುಳ್ಳ ಹರಿದಾಸರಿಗೆ     || ೩ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಎಲ್ಲಾ ಧರ್ಮ ಸಾಧನೆಗಳಲ್ಲಿಯೂ ಶ್ರೀ ಹರಿ ನಾಮ ಸ್ಮರಣೆಯೆ ಶ್ರೇಷ್ಠ ಸಾಧನವೆಂದು ದಾಸರು ಸಾರಿದ್ದಾರೆ. ನಾಮ ಸ್ಮರಣೆಯಿಂದ ಜಾತಿ, ಪಂಥ, ಕುಲ, ಪಾಪ, ಮುಂತಾದವು ಯಾವ ಭೇದಗಳೂ ಉಳಿಯವೆಂಬುದು ದಾಸರ ಅಭಿಪ್ರಾಯ.

**ಚೇತನಾತ್ಮಕ** = ಚಿನ್ಮಯ, ಚಿತ್ ಸ್ವರೂಪ

**ವೆಗ್ಗಳ** = ಅತಿಶಯ

**ಪರಿಪರಿ ವಿಧವೆಲ್ಲ** – ಪ್ರಪಂಚದ ಹಲವು ಪ್ರಸಕ್ತಿಗಳೆಲ್ಲ.

**ನೆರೆನಂಬಿದವರಿಗೆ**– ಚೆನ್ನಾಗಿ (ಅನನ್ಯನೆಂದು) ಶ್ರದ್ಧೆಯಿಟ್ಟವರಿಗೆ.

**ಜಡನಾದರೇನು** – ಮೂರ್ಖನಾದರೇನು.

**Classification:** Keerthane
**Ankita:** purandara vittala
**Location:** NA
**Category:** Bhakti,
**Sub-Category:** Olume, sittu, Vishnu, Krishna, ooru, arasa, kaadu, tayi, tande, patni, makkalu, bandhu, mitra, shatru, karuna, uraga, jenu, Dhyana,
**Pravachana:** NA
**Explanation:** NA